## ಜಿಕೆವಿಕೆಯಿಂದ ಬೇಕರಿ ಉತ್ಪನ್ನ ತರಬೇತಿ ಕೋರ್ಸ್

**ಬೆಂಗಳೂರು:** ನಗರದ ಕೃಷಿ ವಿಶ್ವವಿದ್ಯಾಲಯ(ಜಿಕೆವಿಕೆ)ದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯಿಂದ '14 ವಾರಗಳ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್'ಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಪಾಸ್ /ಫೇಲ್ ಆಗಿರುವವರು ಅರ್ಜಿ ಸಲ್ಲಿಸಬಹುದಾಗಿದ್ದು, ಸಂಯೋಜಕರು ಮತ್ತು ಮುಖ್ಯಸ್ಥರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-65 ಇವರಿಂದ ಅರ್ಜಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಜು.5ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 080-23513370 ಸಂಪರ್ಕಿಸಬಹುದು ಎಂದು ಹಿರಿಯ ವಾರ್ತಾತಜ್ಞರು ಮತ್ತು ಮುಖ್ಯಸ್ಥ ಕೆ. ಶಿವರಾಮು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೇಕರಿ ಟೆಕ್ನಾಲಜಿ ಕೋರ್ಸ್‌ಗೆ ಆಹ್ವಾನ

**ಬೆಂಗಳೂರು:** ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆರವರು ''ಹದಿನಾಲ್ಕು ವಾರಗಳ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್‌ಗೆ ಅರ್ಜಿಯನ್ನು ಆಹ್ವಾನಿಸಿದೆ. ಎಸ್‌ಎಸ್ ಎಲ್‌ಸಿ ಉತ್ತೀರ್ಣ, ಅನುತ್ತೀರ್ಣ ಆಗಿರುವವರು 10 ರೂ. ಸಂದಾಯಿಸಿ ಅರ್ಜಿ ಫಾರಂಗಳನ್ನು ಸಂಯೋಜಕರು ಮತ್ತು ಮುಖ್ಯಸ್ಥರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560065 ಇವರಿಂದ ಪಡೆದ ುಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ಜುಲೈ 5 ರಂದು ಅಪರಾಹ್ನ 4. ಘಂಟೆಯೊಳಗೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080-23513370 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

04-07-2024
Udayavani Pg 03

04-07-2024
Kannadaprabha Pg 03

04-07-2024
Hosadiganta Pg 10

## ಬೇಕರಿ ತರಬೇತಿಗೆ ಅರ್ಜಿ

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯು '14 ವಾರದ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್'ಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಅಥವಾ ಅನುತ್ತೀರ್ಣ ಆಗಿರುವವರಿಂದ ಅರ್ಜಿ ಆಹ್ವಾನಿಸಿದೆ. 10 ರು. ಪಾವತಿಸಿ ಅರ್ಜಿಗಳನ್ನು ಸಂಯೋಜಕರು ಮತ್ತು ಮುಖ್ಯಸ್ಥರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560 065 ಇವರಿಂದ ಪಡೆದುಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಜು.5 ರ ಸಂಜೆ 4 ಗಂಟೆಯೊಳಗೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗೆ ದೂ: 080 - 23513370 ಸಂಪರ್ಕಿಸ ಬಹುದು ಎಂದು ವಿಶ್ವವಿದ್ಯಾನಿಲಯ ಪ್ರಕಟಣೆ ತಿಳಿಸಿದೆ.

ವಾರ್ತಾ ಭಾರತಿ
04-07-2024

## ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್ ಅರ್ಜಿ ಆಹ್ವಾನ

ಬೆಂಗಳೂರು, ಜು.3: ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯವರು 'ಹದಿನಾಲ್ಕು ವಾರಗಳ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್'ಗೆ ಅರ್ಜಿ ಆಹ್ವಾನಿಸಿದ್ದಾರೆ.

ಎಸೆಸೆಲ್ಸಿ ಉತ್ತೀರ್ಣ/ಅನುತ್ತೀರ್ಣ ಆಗಿರುವವರು 10 ರೂ. ಶುಲ್ಕ ನೀಡಿ, ಅರ್ಜಿ ಫಾರಂಗಳನ್ನು ಸಂಯೋಜಕರು ಮತ್ತು ಮುಖ್ಯಸ್ಥರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-65 ಇವರಿಂದ ಪಡೆದುಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ಜು.5 ರಂದು ಮಧ್ಯಾಹ್ನ 4 ಗಂಟೆಯೊಳಗೆ ತಲುಪಿಸಬೇಕು.

ಹೆಚ್ಚಿನ ಮಾಹಿ ತಿಗಾಗಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080-2351 3370ಗೆ ಸಂಪರ್ಕಿ

04-07-2024
V-karantaka Pg 05

# ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನಕ್ಕೆ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಥೀಮ್

## ರಾಜ್ಯ ತೋಟಗಾರಿಕಾ ಇಲಾಖೆ ಸಿದ್ಧತೆ | ಲಾಲ್‌ಬಾಗ್‌ನ ಆಯ್ದ ಸ್ಥಳಗಳಲ್ಲಿ ಕಾಣಸಿಗಲಿದೆ ವಿಶೇಷ ಆಕರ್ಷಣೆ

**ವಿಕ ಸುದ್ದಿಲೋಕ** ಬೆಂಗಳೂರು

ಲಾಲ್‌ಬಾಗ್‌ನಲ್ಲಿ ಈ ಬಾರಿಯ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ರಾರಾಜಿಸಲಿದ್ದಾರೆ!

ಅಂಬೇಡ್ಕರ್ ಥೀಮ್‌ನಡಿ ಫಲಪುಷ್ಪ ಪ್ರದರ್ಶನ ನಡೆಸಲು ರಾಜ್ಯ ತೋಟಗಾರಿಕೆ ಇಲಾಖೆ ತೀರ್ಮಾನಿಸಿದೆ. ಈ ಥೀಮ್ ಕುರಿತು ಹಿಂದಿನ ಪ್ರದರ್ಶನಗಳಲ್ಲಿ ಸಾಕಷ್ಟು ಬಾರಿ ಚರ್ಚೆಗೆ ಬಂದರೂ ಅದು ಅನುಷ್ಠಾನಗೊಂಡಿರಲಿಲ್ಲ. ಇದೀಗ ಅದಕ್ಕೆ ಕಾಲ ಕೂಡಿ ಬಂದಿದೆ.



ಪ್ರದರ್ಶನಕ್ಕಾಗಿ ಉದ್ಯಾನ ಸಜ್ಜಾಗುತ್ತಿದೆ. ಪ್ರದರ್ಶನಕ್ಕೆಂದೇ ರಸ್ತೆಗಳ ಇಕ್ಕೆಲಗಳಲ್ಲಿ ಬೆಳೆಸಿದ ಗಿಡಗಳಲ್ಲಿ ಹೂಗಳು ಅರಳಿ ನಿಂತಿವೆ. ಓರೆ-ಕೋರೆಯಾಗಿ ಬೆಳೆದು ನಿಂತ ಗಿಡಗಳು ಒಪ್ಪ-ಓರಣದೊಂದಿಗೆ ಅಲಂಕೃತಗೊಳ್ಳುತ್ತಿವೆ. ಅಂಬೇಡ್ಕರ್ ಅವರ ಪ್ರತಿಮೆ, ಸಂವಿಧಾನದ ಕೃತಿ, ಅವರು ಬಾಳಿ ಬದುಕಿದ ಮನೆ, ಅವರ ಆದರ್ಶಗಳನ್ನು ಹೂಗಳಲ್ಲಿ ಅನಾವರಣಗೊಳಿಸುವ ಮೂಲಕ ಪ್ರದರ್ಶನವನ್ನು ಅಂದಗೊಳಿಸಲಾಗುತ್ತದೆ.

ಇಂಡೋ ಅಮೆರಿಕನ್ ಹೈಬ್ರಿಡ್ ಸೀಡ್ಸ್ ಕಂಪನಿಯ ಆಕರ್ಷಕ ಅಲಂಕಾರಿಕ ಪುಷ್ಪಗಳ ಜೋಡಣೆ, ಹೂವಿನ ಪಿರಮಿಡ್‌ಗಳು, ವಾರ್ಷಿಕ ಹೂಗಳ ರಂಗು ನೋಡುಗರ ಗಮನ ಸೆಳೆಯಲಿದೆ. ಗಾಜಿನ ಮನೆಯಲ್ಲಿ ಜೋಡಣೆಗೊಳ್ಳಲಿರುವ ಹೂಗಳು ಬಾಡದಂತೆ ಹಾಗೂ ಅಲ್ಲಿನ ವಾತಾವರಣವನ್ನು ತಂಪಾಗಿಡಲು ಗಾಜಿನ ಮನೆಯ ಒಳಾಂಗಣಕ್ಕೆ ಹಿಮಸಿಂಚನ (ಫಾಗರ್ಸ್)ದ ವ್ಯವಸ್ಥೆ ಮಾಡಲಾಗುವುದು.

ಗಾಜಿನಮನೆ, ಬ್ಯಾಂಡ್‌ಸ್ಟ್ಯಾಂಡ್, ಲಾಲ್‌ಬಾಗ್ ಬಂಡೆ, ಕೆರೆ ಏರಿ, ಟೋಪಿಯಾರಿ ಗಾರ್ಡನ್, ಬೋನ್ಸಾಯ್ ಗಾರ್ಡನ್ ಸೇರಿದಂತೆ ಲಾಲ್‌ಬಾಗ್‌ನ ಆಯ್ದ ಸ್ಥಳಗಳಲ್ಲಿ ವಿಶೇಷ ಆಕರ್ಷಣೆಗಳಿರಲಿವೆ.

**ಯಾವೆಲ್ಲಾ ಹೂಗಳಿರುತ್ತವೆ:** ಪ್ರದರ್ಶನದಲ್ಲಿ ಎಂದಿನಂತೆ ಆಂಥೋರಿಯಂ ಹೂಗಳು, ಗುಲಾಬಿ, ಜರ್ಬೆರಾ, ಆರ್ಕಿಡ್, ನಂದಿ ಗಿರಿಧಾಮದ ಇಂಪೇಷನ್ಸ್ ಹೂಗಳು, ರೆಡ್‌ಹಾಟ್ ಪೋಕರ್, ಆಲ್ಸ್ಟ್ರೋಮೇರಿಯನ್ ಲಿಲ್ಲಿ, ಫ್ಯೂಷಿಯಾ, ಅಗಪಾಂಥಸ್, ಸೈಕ್ಲೋಮನ್, ಕ್ಯಾಲಾಲಿಲ್ಲಿ, ಸುಗಂಧ ರಾಜ ಸೇರಿದಂತೆ ಶೀತ ವಲಯದ ಹೂಗಳು ಕಣ್ಮನ ಸೆಳೆಯಲಿವೆ.

ಕುಂಡಗಳಲ್ಲಿ ಅರಳಿದ ದೇಶ-ವಿದೇಶಗಳ ಹತ್ತಾರು ಬಗೆಯ ಹೂಗಳು, ಬೋಗನ್ ವಿಲ್ಲಾದ ಹೂ ಗಿಡಗಳು ಪ್ರದರ್ಶನಗೊಳ್ಳಲಿವೆ. ಇಕೆಬಾನ ಹಾಗೂ ತರಕಾರಿ ಕೆತ್ತನೆ ಪ್ರದರ್ಶನ, ತೋಟಗಳ ಸ್ಪರ್ಧೆ ಮತ್ತು ನಾನಾ ಹೂವಿನ ಜೋಡಣೆ ಕಲೆಗಳ ಪ್ರದರ್ಶನವೂ ಇಲ್ಲಿರಲಿದೆ.

**ಮುಂದಿನ ಸಭೆಗಳಲ್ಲಿ ಚರ್ಚೆ:** ಅಂಬೇಡ್ಕರ್ ಥೀಮ್ ಇಟ್ಟುಕೊಂಡು ಈ ಬಾರಿಯ ಫಲಪುಷ್ಪ ಪ್ರದರ್ಶನ ಮಾಡಲು ನಿರ್ಧರಿಸಲಾಗಿದೆ. ಏನೆಲ್ಲಾ ವಿಶೇಷಗಳನ್ನು ಮಾಡಬಹುದು ಮತ್ತು ಹೇಗೆ ಮಾಡಬಹುದು ಎಂಬುದನ್ನು ಮುಂದಿನ ಸಭೆಗಳಲ್ಲಿ ಚರ್ಚಿಸಲಾಗುವುದು ಎಂದು ರಾಜ್ಯ ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ್ ತಿಳಿಸಿದರು.

04-07-2024
Udayavani
Pg 04



# ಹಲಸಿನ ರುಚಿ ವೈವಿಧ್ಯ

**ಮಾರುಕಟ್ಟೆಗಳಲ್ಲಿ ಈಗ ಹಲಸಿನ ಹಣ್ಣಿನದ್ದೇ ಘಮಲು. ಇದರ ಸಿಹಿ ತೊಳೆಗಳು ಎಲ್ಲರಿಗೂ ಇಷ್ಟ. ಅರಣ್ಯಗಳಲ್ಲಿ ಬೇಕಾಬಿಟ್ಟಿಯಾಗಿ ಬೆಳೆಯುವ ಹಲಸಿನ ವಿಶೇಷ ಖಾದ್ಯಗಳಿಗೆ ಈಗ ಸಿಕ್ಕಾಪಟ್ಟೆ ಬೇಡಿಕೆ ಸೃಷ್ಟಿಯಾಗಿದೆ. ನ್ಯೂ ಏಜ್ ಫುಡ್ ಎಂದೇ ಕರೆಸಿಕೊಳ್ಳುತ್ತಿರುವ ಹಲಸಿನ ಹಣ್ಣಿಗೂ ಒಂದು ವಿಶೇಷ ದಿನವಿದೆ. ಜುಲೈ ನಾಲ್ಕನ್ನು ಎಲ್ಲೆಡೆ ಜಾಕ್ ಫ್ರೂಟ್ ಡೇ ಎಂದು ಆಚರಿಸಲಾಗುತ್ತದೆ.**

**ಉಷಾ ಹೆಗಡೆ**
feedbacklvk@vijaykarnataka.com

ಪೌಷ್ಟಿಕಾಂಶಗಳ ಆಗರ ಹಲಸಿನ ಹಣ್ಣು ಮತ್ತು ಕಾಯಿಯನ್ನು ಈಗಿನ ಜನರೇಷನ್‌ಗೆ ಇಷ್ಟವಾಗುವಂತೆ ಮಾಡುವ ಅನೇಕ ಪ್ರಯೋಗಗಳು ನಡೆಯುತ್ತಿವೆ. ಈ ಪರಿಣಾಮ ಜಾಕ್‌ಫ್ರೂಟ್ ಮಂಚೂರಿಯನ್, ಬರ್ಗರ್, ಮಿಲ್ಕ್‌ಶೇಕ್ ಮುಂತಾದ ಹಲಸಿನ ಹಣ್ಣಿನ ಸ್ಪೆಷಲ್ ಮೆನುಗಳು ಕಾಣಸಿಗುತ್ತಿವೆ. ಇಲ್ಲಿ ಇಂಥ ಕೆಲವು ತಿನಿಸುಗಳನ್ನು ಮಾಡುವ ವಿಧಾನಗಳನ್ನು ನೀಡಲಾಗಿದೆ.

**ಹಲಸಿನ ಹಣ್ಣಿನ ದಿನ**





### ಹಲಸಿನಕಾಯಿ ಚಟ್ನಿ

ಸಾಮಗ್ರಿ: ಎಳೆ ಹಲಸಿನಕಾಯಿ-ಅರ್ಧ, ಉದ್ದಿನಬೇಳೆ, ಹಸಿ ಮೆಣಸಿನಕಾಯಿ, ಹುಣಸೆ ಹಣ್ಣು-ಸ್ವಲ್ಪ, ಉಪ್ಪು-ರುಚಿಗೆ ತಕ್ಕಷ್ಟು, ಅಕ್ಕಿ-ಸ್ವಲ್ಪ, ಹಸಿ ತೆಂಗಿನಕಾಯಿ-ಸ್ವಲ್ಪ.

ವಿಧಾನ: ಎಳೆ ಹಲಸಿನಕಾಯಿಯ ಸಿಪ್ಪೆ ತೆಗೆದು, ಕೊಚ್ಚಿ ಸ್ವಲ್ಪ ಬೇಯಿಸಿ. ಆಮೇಲೆ ಉದ್ದಿನಬೇಳೆ, ಹಸಿ ಮೆಣಸಿನಕಾಯಿ, ಹುಣಸೆ ಹುಳಿ, ಉಪ್ಪು, ಅಕ್ಕಿ ಮತ್ತು ಹಸಿ ತೆಂಗಿನಕಾಯಿಯನ್ನು ಹುರಿದು ರುಬ್ಬಿ, ಇದಕ್ಕೆ ಬೆಂದ ಹಲಸಿನಕಾಯಿ ಹಾಕಿ ಮತ್ತೆ ರುಬ್ಬಿ. ಬಳಿಕ ಈ ಮಿಶ್ರಣಕ್ಕೆ ಸಾಸಿವೆ ಮತ್ತು ಉದ್ದಿನಬೇಳೆಯ ಒಗ್ಗರಣೆ ಕೊಟ್ಟರೆ ರುಚಿಯಾದ ಹಲಸಿನಕಾಯಿ ಚಟ್ನಿ ರೆಡಿ.

### ಜಾಕ್‌ಫ್ರೂಟ್ ಮಂಚೂರಿಯನ್

ಸಾಮಗ್ರಿ: ಮಧ್ಯಮ ಗಾತ್ರದ ಎಳೆ ಹಲಸಿನಕಾಯಿ, ಉಪ್ಪು-ರುಚಿಗೆ ತಕ್ಕಷ್ಟು, ಕಾರ್ನ್ ಫ್ಲೋರ್-2 ಚಮಚ, ಮೈದಾ ಹಿಟ್ಟು-4 ಚಮಚ, ಖಾರ ಪುಡಿ-ಸ್ವಲ್ಪ, ಕರಿಯಲು ಎಣ್ಣೆ, ಶುಂಠಿ ಬೆಳ್ಳುಳ್ಳಿ ಪೇಸ್ಟ್, ಟೊಮೇಟೊ ಸಾಸ್, ಸೋಯಾ ಸಾಸ್, ಗ್ರೀನ್ ಚಿಲ್ಲಿ ಸಾಸ್, ಈರುಳ್ಳಿ.

ವಿಧಾನ: ಹಲಸಿನಕಾಯಿಯನ್ನು ಸಣ್ಣಗೆ ಹೋಳು ಮಾಡಿ, ಸ್ವಲ್ಪ ಉಪ್ಪು ಹಾಕಿ ಒಂದು ಕುದಿ ಬರುವವರೆಗೆ ಬೇಯಿಸಿ. ಕಾರ್ನ್ ಫ್ಲೋರ್‌ಗೆ ಮೈದಾ ಹಿಟ್ಟು, ಉಪ್ಪು, ಖಾರ ಪುಡಿ ಹಾಕಿ ಕಲಸಿ. ಇದಕ್ಕೆ ಬೆಂದ ಹಲಸಿನಕಾಯಿ ಹೋಳನ್ನು ಹಾಕಿ ಅದ್ದಿ ಕಾದ ಎಣ್ಣೆಯಲ್ಲಿ ಗರಿಗರಿಯಾಗಿ ಕರಿದು ತೆಗೆದಿಡಿ. ಈಗ ಸ್ವಲ್ಪ ಎಣ್ಣೆ ಬಿಸಿ, ಶುಂಠಿ, ಬೆಳ್ಳುಳ್ಳಿ ಪೇಸ್ಟ್ ಹಾಕಿ ಹುರಿಯಿರಿ. ಇದಕ್ಕೆ ಟೊಮೆಟೊ ಸಾಸ್, ಸೋಯಾ ಸಾಸ್, ಗ್ರೀನ್ ಚಿಲ್ಲಿ ಸಾಸ್ ಹಾಕಿ ಹುರಿಯಿರಿ. ಬಳಿಕ ಸಣ್ಣಗೆ ಹೆಚ್ಚಿದ ಈರುಳ್ಳಿ ಸೇರಿಸಿ ಹುರಿಯಿರಿ. ಇದಕ್ಕೆ ಸ್ವಲ್ಪ ನೀರಿನಲ್ಲಿ ಕಲಸಿದ ಅರ್ಧ ಚಮಚ ಕಾರ್ನ್ ಫ್ಲೋರ್ ಹಾಕಿ ತಿರುವಿ. ಬಳಿಕ ಈ ಮಿಶ್ರಣಕ್ಕೆ ಕರಿದ ಹಲಸಿನಕಾಯಿ ಹೋಳು ಬೆರೆಸಿದರೆ ಮಂಚೂರಿಯನ್ ತಿನ್ನಲು ರೆಡಿ.

### ಹಲಸಿನ ಹಣ್ಣಿನ ಬರ್ಫಿ

ಸಾಮಗ್ರಿ: ಸಣ್ಣಗೆ ಹೆಚ್ಚಿದ ಹಲಸಿನ ಹಣ್ಣಿನ ಗಟ್ಟಿ ತೊಳೆ-1 ಕಪ್, ತುಪ್ಪ, ಸಕ್ಕರೆ-ಅರ್ಧ ಕಪ್, ಏಲಕ್ಕಿ ಪುಡಿ.

ವಿಧಾನ: ಹಲಸಿನ ಹಣ್ಣಿನ ತೊಳೆಯನ್ನು ತುಪ್ಪದಲ್ಲಿ ಹುರಿದಿಡಿ. ಸಕ್ಕರೆಗೆ ನೀರು ಹಾಕಿ ಎಳೆ ಪಾಕ ಮಾಡಿ. ಇದಕ್ಕೆ ಹಲಸಿನ ಹಣ್ಣಿನ ತೊಳೆ ಹಾಕಿ ಚೆನ್ನಾಗಿ ತಿರುವಿ. ಬಳಿಕ ಏಲಕ್ಕಿ ಪುಡಿ ಮತ್ತು ಒಂದೆರಡು ಚಮಚ ತುಪ್ಪ ಹಾಕಿ. ಈ ಮಿಶ್ರಣ ಗಟ್ಟಿಯಾಗುತ್ತಿದ್ದಂತೆ ತಟ್ಟೆಗೆ ಹಾಕಿ. ಇದು ಆರಿದ ಮೇಲೆ ಬೇಕಾದ ಆಕಾರಕ್ಕೆ ಕತ್ತರಿಸಿ. ನೋಡಲು ಚಾಕ್ಲೇಟ್‌ನಂತೆ ಕಾಣುವ ಹಲಸಿನ ಹಣ್ಣಿನ ಬರ್ಫಿ ತುಂಬಾ ರುಚಿಯಾಗಿರುತ್ತದೆ.

04-07-2024
V-karantaka
Pg 11

**ಲವಲVK GARDEN ಲೋಕ**

# ಬಹುವಾರ್ಷಿಕ ತರಕಾರಿ ಸೀಮೆ ಬದನೆ

ಸೀಮೆ ಬದನೆಕಾಯಿ ಬಹುವಾರ್ಷಿಕ ತರಕಾರಿ ಬೆಳೆಯಾಗಿದ್ದು ಕುಂಬಳ ಜಾತಿಯ ತರಕಾರಿ ಗುಂಪಿಗೆ ಸೇರುತ್ತದೆ. ಇದರ ಗಿಡ ನೋಡುವುದಕ್ಕೆ ಹೀರೆಕಾಯಿ ಅಥವಾ ಸೋರೆಕಾಯಿ ಗಿಡಕ್ಕೆ ಹೋಲುತ್ತದೆ. ಇದನ್ನು ತರಕಾರಿಯಾಗಿ ಅಲ್ಲದೆ ಉಪ್ಪಿನಕಾಯಿ ಮಾಡಲು ಬಳಸುತ್ತಾರೆ. ಇದು ಹೆಚ್ಚಿನ ಪೌಷ್ಟಿಕಾಂಶ ಹೊಂದಿರುವುದರಿಂದ ಆರೋಗ್ಯ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದನ್ನು ಮನೆಯ ಹಿತ್ತಲಿನಲ್ಲಿ/ಕುಂಡಗಳಲ್ಲಿ/ಗ್ರೋ ಬ್ಯಾಗ್‌ಗಳಲ್ಲಿ ಬೆಳೆಯಬಹುದು. ಹಸಿರು ಮನೆ/ನೆರಳು ಪರದೆ ಮನೆಯಲ್ಲೂ ಬೆಳೆಯಬಹುದು. ಈ ಬೆಳೆಯಲ್ಲಿ ಹಸಿರು



ಹಾಗೂ ಕೆನೆ ಬಣ್ಣದ ತಳಿಗಳಿವೆ. ಇದನ್ನು ಬೆಳೆಯಲು 30 ಡಿಗ್ರಿ ಸೆ. ಉಷ್ಣಾಂಶವಿದ್ದರೆ ಉತ್ತಮ. ಚೆನ್ನಾಗಿ ನೀರು ಬಸಿದು ಹೋಗುವಂತಹ ಫಲವತ್ತಾದ ಮಣ್ಣು ಮತ್ತು ರಸಸಾರ 5.5-6.5 ಇದ್ದರೆ ಸೂಕ್ತ. ಈ ಬೆಳೆಯು ಆಮ್ಲೀಯ ಮಣ್ಣಿಗೆ ಸ್ವಲ್ಪ ಸಹಿಷ್ಣುತೆ ಹೊಂದಿದೆ. ನಾಟಿ ಮಾಡಲು ಚೆನ್ನಾಗಿ ಬಲಿತ ಮೊಳಕೆಯೊಡೆದ ಸಂಪೂರ್ಣ ಕಾಯಿ ಬಳಸಬೇಕು. ಆಯ್ಕೆ ಮಾಡಿಕೊಂಡ ಕುಂಡ ಅಥವಾ ಗ್ರೋ ಬ್ಯಾಗ್‌ಗಳಲ್ಲಿ ಮಣ್ಣು, ಗೊಬ್ಬರ, ಕೋ-ಕೋ ಪೀಟ್ ಅನ್ನು ಹಾಕಿ ಮಿಶ್ರಣ ಮಾಡಿ ಕಾಯಿಯ ಮೊಳಕೆಯು ಮೇಲ್ಮುಖವಾಗಿರುವಂತೆ ಮಧ್ಯ ಭಾಗದಲ್ಲಿ ನಾಟಿ ಮಾಡಿ ಬಳ್ಳಿಗಳಿಗೆ ಕೋಲನ್ನು ಆಸರೆಯಾಗಿ ನೀಡಿ ಹಬ್ಬಿಸುವುದು. ನೀರು ಮತ್ತು ಗೊಬ್ಬರವನ್ನು ಬೆಳೆಯ ವಿವಿಧ ಹಂತಗಳಲ್ಲಿ ಸರಿಯಾದ ಸಮಯಕ್ಕೆ ಒದಗಿಸಬೇಕು. ಕೀಟ ಮತ್ತು ರೋಗಗಳು ಕಂಡು ಬಂದರೆ ಅದರ ನಿರ್ವಹಣೆಗಾಗಿ ಬೇವಿನ ಕಷಾಯ ಮತ್ತು ಬೇವಿನ ಎಣ್ಣೆ ಸಿಂಪಡಿಸಬೇಕು. ನಾಟಿ ಮಾಡಿದ 75-80 ದಿನಗಳ ನಂತರ ಕಾಯಿಗಳನ್ನು ಕೊಯ್ಲು ಮಾಡಬಹುದು.

**- ಡಾ. ಎಂ. ಶಾಲಿನಿ, ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ) ಕೃಷಿ ವಿವಿ, ಬೆಂಗಳೂರು**

# ಬೆಳೆ ವಿಮೆ ನೋಂದಣಿಗೆ ಅರ್ಜಿ ಆಹ್ವಾನ

ಬೆಂಗಳೂರು: ತೋಟಗಾರಿಕೆ ಇಲಾಖೆಯಿಂದ 2024-25ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರಿನಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಅನುಷ್ಠಾನಕ್ಕೆ ಯೋಜನೆವಾರು, ಬೆಳೆವಾರು ರೈತರ ವಿವರವನ್ನು ಆನ್‌ಲೈನ್ ಪೋರ್ಟಲ್ (www.samrakshane.karnataka.gov.in) ನಲ್ಲಿ ಮಾತ್ರ ನೋಂದಾಯಿಸಲು ಆದೇಶಿಸಿದ್ದು, ಹವಾಮಾನ ಆಧಾರಿತ ಬೆಳೆಗಳಾದ ಮಾವು ಮತ್ತು ದ್ರಾಕ್ಷಿ ಬೆಳೆಯ ಬೆಳೆ ವಿಮೆ ನೊಂದಣಿಗಾಗಿ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ತೋಟಗಾರಿಕೆ, ಕೃಷಿ ಇಲಾಖೆ, ಬ್ಯಾಂಕ್ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. ರೂಪ್ ಕಿಶೋರ್, ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ವಿಮಾಸಂಸ್ಥೆಯ ಪ್ರತಿನಿಧಿ ಮೊಬೈಲ್ ಸಂಖ್ಯೆ: 9505872795, ಸಹಾಯವಾಣಿ ಸಂಖ್ಯೆ: 1800-425-0505, ತೋಟಗಾರಿಕೆ ಉಪನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ ದೂ. 080-22860640, 9448999213 ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,

04-07-2024
V-karantaka Pg 05

ರಾಮನಗರ ಜಿಲ್ಲೆಯಲ್ಲಿ ಸೊಪ್ಪಿನ ಇಳುವರಿ ಕುಂಠಿತ | ರೇಷ್ಮೆಗೆ ಬೆಲೆ ಇಲ್ಲದೆ ಕಂಗಾಲು

# ರೇಷ್ಮೆ ಬೆಳೆಗಾರರಿಗೆ ಶಾಪವಾದ ಎಲೆಸುರುಳಿ ಕೀಟಬಾಧೆ

■ ವಿಭೂತಿಕೆರೆ ಶಿವಲಿಂಗಯ್ಯ ರಾಮನಗರ

ಜಿಲ್ಲೆಯ ರೇಷ್ಮೆ ಬೆಳೆಗಾರ ರೈತರ ಪಾಲಿಗೆ ಎಲೆ ಸುರುಳಿ ಕೀಟಬಾಧೆ ಶಾಪವಾಗಿ ಪರಿಣಮಿಸಿದ್ದು, ಕೀಟಬಾಧೆ ದಿನೇದಿನೆ ಹೆಚ್ಚುತ್ತಿರುವ ಕಾರಣ ಬೆಳೆಗಾರರು ನಷ್ಟದ ಸುಳಿಗೆ ಸಿಲುಕುವಂತಾಗಿದೆ.

ರೇಷ್ಮೆ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಈ ಬೆಳೆಯನ್ನೇ ನಂಬಿ ಹಲವರು ಜೀವನ ಕಟ್ಟಿಕೊಂಡಿದ್ದಾರೆ. ಬೆಳೆಗೆ ಬೆಲೆ ಸಿಗದಿರುವುದರ ನಡುವೆ ರೇಷ್ಮೆ ತೋಟಗಳಿಗೆ ಎಲೆ ಸುರುಳಿ ಕೀಟಬಾಧೆ ಮತ್ತು ತುಕ್ರಾ (ಥ್ರಿಪ್ಸ್) ರೋಗ ರೈತರನ್ನು ಮತ್ತಷ್ಟು ಕಂಗಾಲು ಮಾಡಿದೆ.

ರಾಮನಗರ ತಾಲೂಕಿನ ಕೈಲಾಂಚ, ಬಿಡದಿ, ಕಸಬಾ ಹೋಬಳಿಯ ಪ್ರಮುಖ ರೇಷ್ಮೆ ಬೆಳೆಯುವ ಪ್ರದೇಶಗಳಲ್ಲಿ ಕೀಟಬಾಧೆ ಕಾಣಿಸಿಕೊಂಡಿದೆ. ರೇಷ್ಮೆ ಸೊಪ್ಪಿನ ಸುಳಿ ತಿನ್ನುವ ಕೀಟಗಳು ಎಲೆಗಳು ಬೆಳೆಯದಂತೆ ಮಾಡುತ್ತಿವೆ. ಇಡೀ ತೋಟ ರೋಗಪೀಡಿತವಾಗಿ ಸೊಪ್ಪಿನ ಇಳುವರಿ ಕುಂಠಿತವಾಗಿದೆ. ಅನಿವಾರ್ಯವಾಗಿ ಇದೇ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡುತ್ತಿರುವ ಕಾರಣ ಹಲವು ರೋಗ ಕಾಣಿಸಿಕೊಳ್ಳುತ್ತಿವೆ.

ಎಲೆ ಸುರುಳಿ ಕೀಟಬಾಧೆಯಿಂದ 100 ಮೊಟ್ಟೆ ಚಾಕಿ ಹುಳು ಬೆಳೆಯುವ ತೋಟದಲ್ಲಿ ಇಂದು 50 ಮೊಟ್ಟೆ ಚಾಕಿ ಹುಳು ಬೆಳೆಯಲೂ ಆಗದ ಸನ್ನಿವೇಶ ಎದುರಾಗಿದೆ. ರೇಷ್ಮೆ ಇಲಾಖೆ ರೋಗ ಹತೋಟಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ತಿಳಿಸಿ ಬೇವಿನ ಎಣ್ಣೆ, ಔಷಧವನ್ನು ಉಚಿತವಾಗಿ ನೀಡಿ ರೈತರಿಗೆ ಆರ್ಥಿಕ ನಷ್ಟ ತಪ್ಪಿಸಬೇಕು. ಜತೆಗೆ ಬೆಳೆ ನಷ್ಟಕ್ಕೆ ಪರಿಹಾರ ನೀಡಬೇಕು ಎನ್ನುತ್ತಾರೆ ರೇಷ್ಮೆ ಬೆಳೆಗಾರ ರೈತ ಲಕ್ಕೋಜನಹಳ್ಳಿಯ ಸಂತೋಷ್.

**ರೋಗ ಲಕ್ಷಣ:** ಎಲೆ ಸುರಳಿ ಕೀಟ ಒಂದು ಬಾರಿಗೆ 300ರಿಂದ 350 ಮೊಟ್ಟೆ ಇಡುತ್ತದೆ. ಆದರೆ, ಒಂದು ಗಿಡದಲ್ಲಿ ಒಂದು ಅಥವಾ ಎರಡು ಮೊಟ್ಟೆಗಳನ್ನು ರೇಷ್ಮೆ ಸೊಪ್ಪಿನ ಸುಳಿ ಭಾಗದಲ್ಲಿ ಇಡುತ್ತದೆ. ಮೊಟ್ಟೆ ಒಡೆದು ಕೀಟ ಹೊರಬಂದು ಸುಳಿ ತಿನ್ನುತ್ತದೆ. ಇದರಿಂದ ಸೊಪ್ಪಿನ ಇಳುವರಿ ಕುಂಠಿತವಾಗುತ್ತದೆ.



ರೈತರೊಬ್ಬರ ತೋಟದಲ್ಲಿ ರೇಷ್ಮೆ ಬೆಳೆಗೆ ಎಲೆ ಸುರಳಿ ಕೀಟ ಬಾಧೆ ಕಾಣಿಸಿಕೊಂಡಿರುವುದು.

ಎಲೆ ಸುರಳಿ ಕೀಟ ಬಾಧೆ ತುಕ್ರಾ ರೋಗ ಹತೋಟಿಗಾಗಿ ರೈತರಿಗೆ 45ಕ್ಕೂ ಹೆಚ್ಚು ಗುಂಪಿನಲ್ಲಿ ತರಬೇತಿ ನೀಡಲಾಗಿದೆ. ಕೆಲವೊಂದು ಪ್ರದೇಶದಲ್ಲಿ ಮಾತ್ರ ಕೀಟಬಾಧೆ ಕಂಡುಬಂದಿದೆ. ಸೂಕ್ತ ಔಷಧ ಸಿಂಪಡಣೆ ನಡೆಸಿದರೆ ಕೀಟ ಬಾಧೆ ನಿಯಂತ್ರಣಕ್ಕೆ ಬರುತ್ತದೆ.



| ಉಮೇಶ್ ಸಹಾಯಕ ನಿರ್ದೇಶಕ, ರೇಷ್ಮೆ ಇಲಾಖೆ

## ಪರಿಹಾರವೇನು?

ಪ್ರಾರಂಭಿಕ ಹಂತದಲ್ಲೇ ಕೀಟ ಕಂಡಾಗ ಆ ರೇಷ್ಮೆ ಕಡ್ಡಿಯನ್ನು ಬುಡದವರೆಗೆ ಕತ್ತರಿಸಿ ಸುಡಬೇಕು. ಇದರಿಂದ ಬೇರೆ ಗಿಡಗಳಿಗೆ ಕೀಟ ಹರಡುವುದನ್ನು ತಡೆಗಟ್ಟಬಹುದು. ರೋಗಬಾಧೆಗೆ ಬೇವಿನ ಎಣ್ಣೆ ಪ್ರಮುಖ ಔಷಧ. ಕಡ್ಡಿ ಕಟಾವು ಮಾಡಿದ 25 ದಿನಗಳ ನಂತರ ಸಿಂಪಡಣೆ ಮತ್ತು ಆನಂತರ 7ನೇ ದಿನಕ್ಕೆ ಬೇವಿನ ಎಣ್ಣೆ ಸಿಂಪಡಿಸಿದರೆ ರೋಗ ಹತೋಟಿಗೆ ಬರುತ್ತದೆ. ನಂತರ 7ನೇ ದಿನಕ್ಕೆ ಸೊಪ್ಪು ಕೊಯ್ಲು ಮಾಡಬಹುದು. ಕೊಟ್ಟಿಗೆ ಗೊಬ್ಬರ ಬಳಸಿದರೆ ರೋಗ ಕಡಿಮೆಯಾಗಲಿದೆ ಎಂದು ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಉಮೇಶ್ ತಿಳಿಸಿದ್ದಾರೆ.

04-07-2024
Vijayavani
Pg 11

04-07-2024
Dec Hrd
Pg 01

# ICAR - National Institute of Animal Nutrition and Physiology

Adugodi, Bengaluru - 560 030

Department of Agricultural Research and Education, Government of India

F. No. 2-5(174)/Estt/2022-23/ Date: 01-07-2024

**NIANP/ADV-Project-V-Estt/2024**

Applications are invited for the position of Senior Research Fellow under the NASF project entitled "Metabolomics fingerprinting of body fluids for development of a metabolite-based novel semen extender for enhancing fertility of bull sperm and diagnostic assays for detection of sub-clinical hemoprotozoan diseases in cattle (Project No.NASF/MA-9015/2022-23)". The details of eligibility, remuneration, etc are available on the Institute's website: www.nianp.res.in. Interested candidates may send their application in the prescribed format to the PI of the project on or before 15-07-2024. The short-listed candidates will be intimated through e-mail/phone for attending the interview at ICAR-NIANP, Bengaluru.

Sd/- **Administrative Officer**